ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 229(1863)
ಸದಸ್ಯರ ಹೆಸರು: ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ: 24.03.2020
ಉತ್ತರಿಸುವವರು: ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ನಗರಸಭೆ ವ್ಯಾಪ್ತಿಯಲ್ಲಿನ ಸ್ವತ್ತಿನ ಎ-ಖಾತೆಗಳಂತೆ ಕಟ್ಟಡ ಪರವಾನಗಿಗಳನ್ನು ಖಾತೆದಾರರಿಗೆ ವರ್ಗಾಯಿಸಲು ಇರುವ ಮಾನದಂಡಗಳೇನು; ಇದಕ್ಕಾಗಿ ಯಾವ ದಾಖಲಾತಿಗಳನ್ನು ಸಲ್ಲಿಸಬೇಕು; ಇದಕ್ಕೆ ಬೇಕಾಗುವ ಕಾಲಾವಕಾಶಗಳೆಷ್ಟು; (ವಿವರ ನೀಡುವುದು)	ನಗರಸಭೆಯ ವ್ಯಾಪ್ತಿಯಲ್ಲಿ ಸ್ವತ್ತಿಗೆ ಎ-ಖಾತಾ ಎಂಬ ಪದ್ಧತಿ ಇರುವುದಿಲ್ಲ. ಖಾತೆಗಳನ್ನು ವರ್ಗಾಯಿಸಲು ಇರುವ ಅವಕಾಶದಂತೆ, ಕಟ್ಟಡ ಪರವಾನಗಿಗಳನ್ನು ವರ್ಗಾಯಿಸಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ. ಅಧಿಕೃತ "ಖಾತಾ" ಹೊಂದಿದ ಸ್ವತ್ತುಗಳಿಗೆ ನಾಗರೀಕರು / ಆರ್ಕಿಟೆಕ್ಟ್‌ಗಳು Land and Building Plan Approval System (LBPAS) ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ಕಟ್ಟಡ ಪರವಾನಿಗೆ ಅರ್ಜಿಯನ್ನು ಸಲ್ಲಿಸಬೇಕಿರುತ್ತದೆ. ಅರ್ಜಿಯೊಂದಿಗೆ ಖಾತಾ ನಕಲು ಪ್ರತಿ, ತೆರಿಗೆ ಪಾವತಿಸಿದ ರಶೀದಿ, ಅಂದಾಜು ವೆಚ್ಚದ ವಿವರ ಮತ್ತು ನಿಯಮಾನುಸಾರ ತಯಾರಿಸಿದ ಕಟ್ಟಡದ ನಕ್ಷೆ ಸಲ್ಲಿಸಬೇಕಾಗುತ್ತದೆ. ತಂತ್ರಾಂಶದಲ್ಲಿ ಕಟ್ಟಡ ಉಪವಿಧಿ ಮತ್ತು ವಲಯವಾರು ನಿಯಮಾವಳಿ ಪ್ರಕಾರ ಕಟ್ಟಡ ನಕ್ಷೆಯನ್ನು ಆನ್‌ಲೈನಲ್ಲಿ ಪರಿಶೀಲಿಸಿ ಸಕಾಲ ಸೇವೆಯಡಿ ಕಟ್ಟಡ ಪರವಾನಿಗೆಯನ್ನು 30 ದಿನಗಳ ಒಳಗೆ ನೀಡಲಾಗುವುದು.
ಆ	ಸದರಿ ಕಟ್ಟಡ ಪರವಾನಗಿ ಬದಲಾವಣೆ / ತಿದ್ದುಪಡಿ ಮಾಡಲು ನಿಯಮಗಳಲ್ಲಿ ಅವಕಾಶವಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು?	Karnataka Municipalities Model Building Bye-laws 2017ರ ಅಧ್ಯಾಯ-3ರ 3.15.5 ರಲ್ಲಿ ತಿಳಿಸಿರುವಂತೆ ಕಟ್ಟಡ ಪರವಾನಗಿಯನ್ನು ಬದಲಾವಣೆ / ತಿದ್ದುಪಡಿ ಮಾಡಲು ನಿಯಮಗಳಲ್ಲಿ ಅವಕಾಶವಿದೆ.

ಸಂಖ್ಯೆ: ನಅಇ 58 ಜಿಇಎಲ್ 2020

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು